**ಕರ್ನಾಟಕ ಸರ್ಕಾರ**
**(ಸಿ.ಆರ್.ಪಿ.67)**

| |
|---|
| **ಹೇಳಿಕೆ ಹಾಳೆ** |
| **(ಆರ್.ಪಿ.ಸಂಖ್ಯೆ 57)** |
| **ನಮೂನೆ ಸಂಖ್ಯೆ 4** |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 103/2015**

**ಫ್ರಾಸಾ- 10 ಚಾಸಾ- 39**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ರಂಜಿತಾ ಬಿ ಕೆ |
| ಗಂಡನ ಹೆಸರುಃ | : | ರಾಜ ಶೆಟ್ಟಿ |
| ವಯಸ್ಸುಃ | : | 41 ವರ್ಷ |
| ಉದ್ಯೋಗಃ | : | ಹಿರಿಯ ಮೋಟಾರ್ ವಾಹನ ನಿರೀಕ್ಷಕರು |
| ವಾಸ | : | ಬೆಂಗಳೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 04-09-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ನಾನು ಹಾಸನ ಪ್ರಾದೇಶಿಕ ಸಾರಿಗೆ ಇಲಾಖೆಯಲ್ಲಿ ಮೋಟಾರು ವಾಹನ ತಪಾಸಣಾ ಅಧಿಕಾರಿಯಾಗಿ 2009 ರಿಂದ 2014ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 5-12-2013ರಂದು ವಾಹನ ಸಂಖ್ಯೆ ಕೆಎ-13-ಜೆ-8534ರ ಮೋಟಾರ್ ಸೈಕಲ್ ವಾಹನದ ಅಂದಾಜು ಬೆಲೆ ಇಂಧನ ವೆಚ್ಚ, ನಿರ್ವಹಣಾ ವೆಚ್ಚ ಮತ್ತಿತರ ಮಾಹಿತಿಯನ್ನು ನೀಡುವಂತೆ ಹಾಸನ ಲೋಕಾಯುಕ್ತ ಪಿಐ ರವರು ಮನವಿ ಸಲ್ಲಿಸಿದ್ದರು. ಅದರಂತೆ ನಾನು ದಿನಾಂಕ 18-2-2014ರಂದು ನನ್ನ ವರದಿಯನ್ನು ಕಛೇರಿಗೆ ಸಲ್ಲಿಸಿದೆನು. ಅದನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-66 ಎಂದು ಅದರಲ್ಲಿರುವ ನನ್ನ ರುಜುವನ್ನು ನಿಪಿ-66(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ** ಶ್ರೀ ಡಿ.ಎಂ.ಪಿ ವಕೀಲರ ಪರವಾಗಿ ಶ್ರೀ ಎಂ ಬಿ **ವಕೀಲರಿಂದಃ**

ನಾನು ಸದರಿ ವಾಹನವನ್ನು ಪರಿಶೀಲಿಸಿ ನನ್ನ ವರದಿಯನ್ನು ನೀಡಿಲ್ಲ. ವಾಹನ ಕ್ರಮಿಸಿದ ದೂರು, ಅದು ತಯಾರಾದ ವರ್ಷ ಇದರ ಆಧಾರದಲ್ಲಿ ನನ್ನ ವರದಿ ನೀಡಿರುತ್ತೇನೆ. ಲೋಕಾಯುಕ್ತ ಪೊಲೀಸರು ನೀಡಿದ ಮಾಹಿತಿಯ ಮೇಲೆ ವಾಹನವನ್ನು ಪರಿಶೀಲಿಸದೆ ವರದಿ ನೀಡಿರುವುದು ಎಂದರೆ ಸಾಕ್ಷಿಯು ವಾಹನವನ್ನು ಪರಿಶೀಲಿಸಿಲ್ಲ ಎನ್ನುತ್ತಾರೆ. ನಾನು ಲೋಕಾಯುಕ್ತಕ್ಕೆ ಸುಳ್ಳು ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆ ವಾಹನದ ಮಾಲೀಕರಿಂದ ಆ ವಾಹನವನ್ನು ಎಷ್ಟು ಕಿಮಿ೦ಾ ಓಡಿಸಿದ್ದಾರೆನ್ನುವ ಬಗ್ಗೆ ಮಾಹಿತಿ ಪಡೆದುಕೊಳ್ಳಲಿಲ್ಲ. ಪ್ರತಿವರ್ಷ ಆ ವಾಹನವನ್ನು ಎಷ್ಟು ಕಿಮಿ೦ಾ ಓಡಿಸಿರುತ್ತಾರೆ ಎಂಬ ಬಗ್ಗೆ ವಾಹನ ಮಾಲೀಕರಿಂದ ವರದಿ ಪಡೆದುಕೊಂಡಿಲ್ಲ. ನನ್ನ ವರದಿಯಲ್ಲಿ ವಾಹನದ ಅಂದಾಜು ಮೈಲೇಜ್ ಯಾವ ಆಧಾರದಲ್ಲಿಕೊಟ್ಟಿದ್ದೇನೆ ಎಂದರೆ ಸಾಕ್ಷಿಯು ಹೀರೋಹೋಂಡಾ ಸ್ಪೆಂಡರ್ ವಾಹನವನ್ನು 60ಕಿಮಿ೦ಾ ಮೈಲೇಜ್ ನಲ್ಲಿ ಓಡಿಸಬಹುದು, ಆ ಆಧಾರದಲ್ಲಿ ಕೊಟ್ಟಿದ್ದೇನೆ ಎನ್ನುತ್ತಾರೆ. ನಾನುಸದರಿ ವಾಹನ 60 ಕಿಮಿ೦ಾ ಮೈಲೇಜ್ ನಲ್ಲಿ ಓಡುತ್ತದೆ ಎಂಬ ಬಗ್ಗೆ ಶೋರೂಂನಿಂದ ಯಾವುದೇ ವರದಿ ಪಡೆದುಕೊಂಡಿಲ್ಲ. ಆ ವಾಹನ ಅಂದಾಜು ಮೈಲೇಜ್ 60ಕಿಮಿ೦ಾ ಕೊಡುತ್ತದೆ ಎಂದು ಯಾವುದೇ ಆಧಾರವಿಲ್ಲದೆ ಸುಳ್ಳು ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

2.ಇಂಧನವೆಚ್ಚ ಪ್ರತಿವರ್ಷ ಎಷ್ಟು ಇತ್ತು ಎಂದು ನಾನು ಮಾಹಿತಿ ಪಡೆದುಕೊಂಡಿಲ್ಲ, ಸರಾಸರಿಯಾಗಿ ಹಾಕಿರುತ್ತೇನೆ. 2000 ರಿಂದ 2013ರವರೆಗಿನ ಇಂಧನದ ಬೆಲೆಯನ್ನು ಪರಿಗಣಿಸಿರುತ್ತೇನೆ. ಹಾಗೆಯೇ ನಿರ್ವಹಣಾ ವೆಚ್ಚವನ್ನು ಸಹ ಯಾವುದೇ ದಾಖಲೆಗಳಿಲ್ಲದೆ ಹೇಳಿರುತ್ತೇನೆ ಎಂದರೆ ಸರಿ. ಆ ವಾಹನ ಖರೀದಿಸಿದ ಶೋರೂಂ ನಲ್ಲಿ ವಾಹನ ರಿಪೇರಿಗೆ ಎಷ್ಟು

ಖರ್ಚು ಬರುತ್ತದೆ ಎಂದು ಮಾಹಿತಿ ಪಡೆದುಕೊಂಡಿಲ್ಲ. ನಾನು ಯಾವುದೇ ದಾಖಲೆಗಳನ್ನು ಪರಿಶೀಲಿಸದೆ ಊಹಾತ್ಮಕವಾಗಿ ಅಂದಾಜಿನಲ್ಲಿ ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ತನಿಖಾಧಿಕಾರಿಗೆ ಈ ವಾಹನದ ಇಂಧನವೆಚ್ಚ, ನಿರ್ವಹಣಾ ವೆಚ್ಚ ಇತ್ಯಾದಿ ಎಷ್ಟು ಆಗುತ್ತದೆ ಎಂದು ನೀಡಿರುವ ಸ್ಟೇಟ್ಮೆಂಟನ್ನು ನನಗೆ ತನಿಖಾಧಿಕಾರಿ ಕಳುಹಿಸಿಲ್ಲ. ಲೋಕಾಯುಕ್ತ ಪೊಲೀಸರುಇಂತಿಷ್ಟು ದತ್ತಾಂಶಕ್ಕೆ ವರದಿ ನೀಡಬೇಕೆಂದು ಕೋರಿಕೊಂಡ ಮೇರೆಗೆ ನಾನು ವರದಿ ನೀಡಿರುವುದು ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**